ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12

ಸಂ: ಪಪೂಶಿಇ/ಪರೀಕ್ಷೆ/ನೊ&ಫ/2017-18. ದಿನಾಂಕ:25-10-2017.

## ಸು ತ್ತೋ ಲೆ

**ವಿಷಯ:** 2018ರ ಮಾರ್ಚ್‌ನಲ್ಲಿ ನಡೆಸುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ರಿಪೀಟರ್ ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಲು ಕೊನೆಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ: 18-08-2017.

* * * * *

ವಿಷಯಕ್ಕೆ ಸಂಬಂಧಿಸಿದಂತೆ 2018ರ ಮಾರ್ಚ್‌ನಲ್ಲಿ ನಡೆಸಲಾಗುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳಿಗೆ ರಿಪೀಟರ್ ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಲು ಉಲ್ಲೇಖದನ್ವಯ ಈ ಕೆಳಗಿನಂತೆ ನಿಗದಿಪಡಿಸಲಾಗಿತ್ತು.

| ಕ್ರಮ ಸಂಖ್ಯೆ | ಅರ್ಜಿಗಳ ವಿವರ | ಅಭ್ಯರ್ಥಿಗಳು ಕಾಲೇಜಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ |
|---|---|---|
| 1. | ದಂಡ ಶುಲ್ಕವಿಲ್ಲದೆ | **20-09-2017** |
| 2. | ದಂಡ ಶುಲ್ಕ ದೊಂದಿಗೆ :<br>ದಿನವೊಂದಕ್ಕೆ ₹ 36.00 ರಂತೆ ಗರಿಷ್ಠ ₹ 360.00 (ಪರೀಕ್ಷಾ ಶುಲ್ಕ ಹೊರತು ಪಡಿಸಿ) | **06-10-2017** |
| 3. | **ದಂಡ ಶುಲ್ಕ ₹ 360.00 ಜೊತೆಗೆ ದಿನಾಂಕ 07-10-2017 ರಿಂದ 26-10-2017ರವರೆಗೆ ದಿನ ಒಂದಕ್ಕೆ ₹ 50.00 ರಂತೆ ಗರಿಷ್ಠ ₹ 1000.00 ವಿಶೇಷ ದಂಡ ಶುಲ್ಕ ಸಹಿತ ಪರೀಕ್ಷಾ ಶುಲ್ಕ ಹಾಗೂ ಅರ್ಜಿ ಸಲ್ಲಿಸುವ ಬಗ್ಗೆ** | **26-10-2017** |

ದಿನಾಂಕ **26-10-2017**ರೊಳಗೆ ಪರೀಕ್ಷಾ ಶುಲ್ಕ ಸಂದಾಯ ಮಾಡಲಾಗದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿಗಳ ಪೋಷಕರು ಸದರಿ ಪರೀಕ್ಷೆಗೆ ಪರೀಕ್ಷಾ ಶುಲ್ಕ ಸಂದಾಯ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಸಂದಾಯ ಮಾಡಲು ದಿನಾಂಕ **31-10-2017** ರವರೆಗೆ ದಂಡ ಶುಲ್ಕ ಮತ್ತ ವಿಶೇಷ ದಂಡ ಶುಲ್ಕ **₹ 1360.00** ಹಾಗೂ ಸಲ್ಲುವ ಪರೀಕ್ಷಾ ಶುಲ್ಕಗಳೊಂದಿಗೆ ವಿಶೇಷ ಕಾಲಾವಕಾಶವನ್ನು ಕಲ್ಪಿಸಿ ಕೊಡಲಾಗಿದೆ:

**ಸದರಿ ಪರೀಕ್ಷೆಗಳಿಗೆ ರಿಪೀಟರ್ ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಸಲ್ಲಿಸಲು ಇದೇ ಕಡೆ ಅವಕಾಶವಾಗಿರುತ್ತದೆ ಹಾಗೂ ಈ ಕಾಲಾವಕಾಶವನ್ನು ಯಾವುದೇ ಕಾರಣಕ್ಕೆ ಮುಂದೂಡಲಾಗುವುದಿಲ್ಲ.**

ಸದರಿ ವಿಶೇಷ ಕಾಲಾವಕಾಶದಲ್ಲಿ ಸಲ್ಲಿಸಲಾದ ರಿಪೀಟರ್ ಶುಲ್ಕಗಳನ್ನು ದಿನಾಂಕ 02-11-2017 ರಂದು ಖಜಾನೆಗೆ ಸಂದಾಯ ಮಾಡುವುದು ಹಾಗೂ ಅರ್ಜಿಗಳನ್ನು ದಿನಾಂಕ 04-11-2017ರಂದು ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು. ಉಪನಿರ್ದೇಶಕರು ತಮ್ಮ ಜಿಲ್ಲೆಯಲ್ಲಿ ಹೀಗೆ ಸ್ವೀಕರಿಸಲಾದ ಅರ್ಜಿಗಳನ್ನು ಕೇಂದ್ರ ಕಛೇರಿಗೆ ದಿನಾಂಕ 07-11-2017ರಂದು ತಲುಪಿಸತಕ್ಕದ್ದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು:

1) ಜಿಲ್ಲಾ ಉಪನಿರ್ದೇಶಕರಿಗೆ.
2) ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಚಾರ್ಯರಿಗೆ.
3) ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, (ಇಲಾಖಾ ಅಂತರ್ ಜಾಲದಲ್ಲಿ ಪ್ರಕಟಿಸಲು)